All India Radio: Bangalore
National Bulletin In Kannada
11.08.2026 07.35 a.m.
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಯುಪಿಐ ಬಳಕೆದಾರರ ಮೇಲೆ ಯಾವುದೇ ತೆರಿಗೆ ಅಥವಾ ವಹಿವಾಟು ಶುಲ್ಕ ವಿಧಿಸುವುದಿಲ್ಲ - ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಸ್ಪಷ್ಟನೆ

೨. ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ದೇಶದ ಕೃಷಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಫೆಲೋಶಿಪ್ ಮೊತ್ತ ಬಿಡುಗಡೆ

೩. ಕೊಲಂಬೋದಲ್ಲಿ ಪ್ರಬಲ ಭೂಕಂಪ; ಕನಿಷ್ಠ ೧೩೨ ಮಂದಿ ಸಾವು, ೫೭೦ ಜನರಿಗೆ ಗಾಯ

೪. ೨೩ ವರ್ಷದೊಳಗಿನವರ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಶಿಪ್; ಮೊದಲ ದಿನವೇ ಭಾರತಕ್ಕೆ ೪ ಚಿನ್ನ ಸೇರಿ ಒಟ್ಟು ೧೭ ಪದಕ

---

ತೆರಿಗೆ ಮತ್ತು ಇತರ ಕಾನೂನುಗಳ ತಿದ್ದುಪಡಿ ಮಸೂದೆ-೨೦೨೭ ಅನ್ನು ಸಂಸತ್ತು ನಿನ್ನೆ ಅಂಗೀಕರಿಸಿದೆ. ಚರ್ಚೆಯ ಬಳಿಕ ರಾಜ್ಯಸಭೆ, ಮಸೂದೆಯನ್ನು ಲೋಕಸಭೆಗೆ ಹಿಂತಿರುಗಿಸಿದೆ. ಲೋಕಸಭೆ ಈಗಾಗಲೇ ಮಸೂದೆಯನ್ನು ಅಂಗೀಕರಿಸಿತ್ತು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಸೂದೆಯನ್ನು ಮಂಡಿಸಿದರು.

ಪಾವತಿ ಮತ್ತು ವಸಾಹತು ವ್ಯವಸ್ಥೆಗಳ ಕಾಯ್ದೆ, ೨೦೦೭, ಆದಾಯ ತೆರಿಗೆ ಕಾಯ್ದೆ-೨೦೨೫ ಮತ್ತು ಹಣಕಾಸು ಕಾಯ್ದೆ-೨೦೨೬ಕ್ಕೆ ತಿದ್ದುಪಡಿ ತರಲು ಮಸೂದೆ ಉದ್ದೇಶಿಸಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಮತ್ತು ಅಂತಾರಾಷ್ಟ್ರೀಯ ಇತ್ಯರ್ಥಗಳ ಬ್ಯಾಂಕ್, ಸರ್ಕಾರದ ಭದ್ರತಾ ಪತ್ರಗಳಲ್ಲಿನ ಹೂಡಿಕೆಯಿಂದ ಗಳಿಸುವ ಬಡ್ಡಿಗೆ ಆದಾಯ ತೆರಿಗೆ ಪಾವತಿಸುವುದರಿಂದ ವಿನಾಯಿತಿ ಪಡೆಯಲಿದ್ದಾರೆ.

ಭಾರತದ ಉತ್ಪಾದನಾ ವ್ಯವಸ್ಥೆಯನ್ನು ಬಲಪಡಿಸುವುದು, ಹೂಡಿಕೆ ಆಕರ್ಷಿಸುವುದು ಮತ್ತು ಉದ್ಯೋಗ ಸೃಷ್ಟಿಸುವುದು ಮಸೂದೆಯ ಪ್ರಮುಖ ಉದ್ದೇಶಗಳಾಗಿವೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದರು.

ಯುಪಿಐ ಬಳಕೆದಾರರ ಮೇಲೆ ಯಾವುದೇ ತೆರಿಗೆ ಅಥವಾ ವಹಿವಾಟು ಶುಲ್ಕ ವಿಧಿಸುವುದಿಲ್ಲ. ಸಣ್ಣ ವ್ಯಾಪಾರಿಗಳು ಮತ್ತು ಗ್ರಾಹಕರು ಯುಪಿಐ ವಹಿವಾಟಿಗೆ ವ್ಯಾಪಾರಿ ರಿಯಾಯತಿ ದರ - ಎಂಡಿಆರ್ ಪಾವತಿಸಬೇಕಾಗಿಲ್ಲ ಎಂದು ಸಚಿವರು. ಸ್ಪಷ್ಟಪಡಿಸಿದರು.

ಧ್ವನಿ- ಸಚಿವೆ ನಿರ್ಮಲಾ ಸೀತಾರಾಮನ್

---

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸಂಸತ್ ಕಲಾಪಕ್ಕೆ ಅಡ್ಡಿಪಡಿಸುತ್ತಿದ್ದಾರೆ ಹಾಗೂ ಚರ್ಚೆಯ ವಿಷಯವನ್ನು ಪದೇಪದೇ ಬದಲಾಯಿಸುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ.

ನವದೆಹಲಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ನಾಯಕ ಜೆ.ಪಿ. ನಡ್ಡಾ, ರಾಹುಲ್ ಗಾಂಧಿ ಅವರ ಉದ್ದೇಶ ಸಂವಾದ ನಡೆಸುವುದಲ್ಲ, ಬದಲಾಗಿ ಗೊಂದಲ ಸೃಷ್ಟಿಸುವುದಾಗಿದೆ ಎಂದು ದೂರಿದರು.

ಸರ್ಕಾರವು ಚರ್ಚೆ ನಡೆಸಲು ಸದಾ ಸಿದ್ಧವಿದೆ ಹಾಗೂ ಯಾವುದೇ ವಿಷಯದ ಕುರಿತಾದ ಪ್ರತಿಯೊಂದು ಪ್ರಶ್ನೆಗೂ ಗೃಹ ಸಚಿವ ಅಮಿತ್ ಶಾ ಉತ್ತರಿಸಲು ಸಿದ್ಧರಿದ್ದಾರೆ ಎಂದು ಅವರು ಹೇಳಿದರು.

ಸಂಸತ್ ಸದನ ಸುಗಮವಾಗಿ ಕಾರ್ಯನಿರ್ವಹಿಸಬೇಕು ಎಂಬುದು ಸರ್ಕಾರದ ನಿಲುವಾಗಿದೆ ಎಂದು ಜೆ.ಪಿ. ನಡ್ಡಾ ತಿಳಿಸಿದರು.

---

ಕೃಷಿ ಮತ್ತು ರೈತರ ಕಲ್ಯಾಣ ಸಚಿವ ಶಿವರಾಜ್ ಸಿಂಗ್ ಚೌಹಾಣ್, ನವದೆಹಲಿಯಲ್ಲಿ ರಾಷ್ಟ್ರೀಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ದೇಶದ ಕೃಷಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮತ್ತು ಫೆಲೋಶಿಪ್ ಮೊತ್ತ ಬಿಡುಗಡೆ ಮಾಡಿದ್ದಾರೆ.

ಈ ಯೋಜನೆಯಡಿ ೬ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ೨೧ ಕೋಟಿ ರೂಪಾಯಿಗೂ ಅಧಿಕ ಮೊತ್ತವನ್ನು ನೇರ ನಗದು ವರ್ಗಾವಣೆ-ಡಿಬಿಟಿ ಮೂಲಕ ನೀಡಲಾಗಿದೆ.

ಇನ್ನು ಮುಂದೆ ಕೃಷಿ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು ನೇರವಾಗಿ ವಿದ್ಯಾರ್ಥಿವೇತನ ದೊರೆಯಲಿದೆ. ಇದರಿಂದ ವಿಳಂಬ ನಿವಾರಣೆಯಾಗಲಿದ್ದು, ವಿದ್ಯಾರ್ಥಿಗಳು ತಮ್ಮ ಶಿಕ್ಷಣದತ್ತ ಹೆಚ್ಚಿನ ಗಮನ

ಹರಿಸಲು ಸಾಧ್ಯವಾಗಲಿದೆ. ವಿದ್ಯಾರ್ಥಿವೇತನ ವಿತರಣೆಯನ್ನು ಪಾರದರ್ಶಕ, ತ್ವರಿತ ಮತ್ತು ಸರಳಗೊಳಿಸಲು ಎನ್‌ಎಸ್‌ಪಿ-ಡಿಬಿಟಿ ವ್ಯವಸ್ಥೆ ನೆರವಾಗಲಿದೆ ಎಂದು ಸಚಿವರು ತಿಳಿಸಿದರು.

---

ಜಾರ್ಖಂಡ್‌ನಲ್ಲಿ ವಿದ್ಯಾರ್ಥಿಗಳ ಪ್ರತಿಭಟನೆ ಮುಂದುವರಿದಿದ್ದು, ರಾಂಚಿಯಲ್ಲಿ ನಿನ್ನೆ ನಡೆದ ವಿಧಾನಸಭಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ವಿದ್ಯಾರ್ಥಿ ನಾಯಕ ದೇವೇಂದ್ರನಾಥ್ ಮಹತೋ ಅವರ ಆರೋಗ್ಯ ಹದಗೆಟ್ಟ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ರಕ್ತದಲ್ಲಿನ ಸಕ್ಕರೆ ಪ್ರಮಾಣ ತೀವ್ರವಾಗಿ ಕುಸಿದಿರುವುದರಿಂದ ಅವರ ಸ್ಥಿತಿ ಗಂಭೀರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ.

ರಾಜ್ಯದಲ್ಲಿ ನೇಮಕಾತಿ ಪರೀಕ್ಷೆಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ವಿರುದ್ಧ ಮಹತೋ ಕಳೆದ ೯ ದಿನಗಳಿಂದ ಉಪವಾಸ ಸತ್ಯಾಗ್ರಹ ನಡೆಸುತ್ತಿದ್ದಾರೆ. ಜಾರ್ಖಂಡ್ ವಿಧಾನಸಭೆ ಸಮೀಪ ಪೊಲೀಸರು ನಡೆಸಿದ ಲಾಠಿ ಪ್ರಹಾರದಲ್ಲಿ ತಮಗೆ ಗಾಯವಾಗಿದೆ ಎಂದು ಅವರು ಆರೋಪಿಸಿದ್ದಾರೆ.

ವಿದ್ಯಾರ್ಥಿಗಳ ಮೇಲಿನ 'ಪೊಲೀಸ್ ದೌರ್ಜನ್ಯ' ಮತ್ತು ಲಾಠಿ ಪ್ರಹಾರವನ್ನು ಖಂಡಿಸಿ ಬಿಜೆಪಿ ಇಂದು ಜಾರ್ಖಂಡ್ ಬಂದ್‌ಗೆ ಕರೆ ನೀಡಿದೆ. ಬೆಳಗ್ಗೆ ೮ರಿಂದ ಮಧ್ಯರಾತ್ರಿವರೆಗೆ ಬಂದ್ ನಡೆಯಲಿದ್ದು, ಅಗತ್ಯ ಸೇವೆಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಆದಿತ್ಯ ಸಾಹು ತಿಳಿಸಿದ್ದಾರೆ.

ನಿನ್ನೆ ಜಾರ್ಖಂಡ್ ವಿಧಾನಸಭೆ ಸಮೀಪ ಪ್ರತಿಭಟನಾಕಾರರು ಹಲವು ಬ್ಯಾರಿಕೇಡ್‌ಗಳನ್ನು ದಾಟಿದ ಬಳಿಕ ಪೊಲೀಸರು ಜಲಫಿರಂಗಿ, ಅಶ್ರುವಾಯು ಹಾಗೂ ಲಾಠಿ ಪ್ರಹಾರ ನಡೆಸಿದರು.

---

ಕೊಲಂಬಿಯಾದ ಪಶ್ಚಿಮ ಭಾಗದಲ್ಲಿ ಸಂಭವಿಸಿದ ೭.೪ ತೀವ್ರತೆಯ ಪ್ರಬಲ ಭೂಕಂಪದಲ್ಲಿ ಸುಮಾರು ೧೩೨ ಮಂದಿ ಮೃತಪಟ್ಟಿದ್ದು, ೫೭೦ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ನಿನ್ನೆ ಸಂಭವಿಸಿದ ಭೂಕಂಪದ ಕೇಂದ್ರಬಿಂದು ರಾಜಧಾನಿ ಬೊಗೋಟಾದಿಂದ ಸುಮಾರು ೪೦೦ ಕಿಲೋಮೀಟರ್ ದೂರದ ಚೋಕೋ ಪ್ರದೇಶದ ಸ್ಯಾನ್ ಜೋಸೆ ಡೆಲ್ ಪಾಲ್ಮಾರ್ ಸಮೀಪದಲ್ಲಿತ್ತು. ನೂರಾರು ಕಟ್ಟಡಗಳು ಹಾನಿಗೊಳಗಾಗಿದ್ದು, ಹಲವರು ಅವಶೇಷಗಳಡಿ ಸಿಲುಕಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ. ೨೦ಕ್ಕೂ ಹೆಚ್ಚು ಪುರಸಭೆಗಳು

ಬಾಧಿತವಾಗಿವೆ. ಭೂಕಂಪದ ಬಳಿಕ ಭೂಕಂಪೋತ್ತರ ಕಂಪನಗಳ ಸಾಧ್ಯತೆಯ ಬಗ್ಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

---

ಭಾರತಕ್ಕೆ ಇ-ವೀಸಾ ಹೊಂದಿರುವ ವಿದೇಶಿಯರು ಪ್ರವೇಶಿಸಲು ಅನುಮತಿ ನೀಡುವ ೧೧ ಅಂತಾರಾಷ್ಟ್ರೀಯ ಬಂದರುಗಳನ್ನು ಸರ್ಕಾರ ಹೆಚ್ಚುವರಿಯಾಗಿ ಅಧಿಸೂಚಿಸಿದೆ. ಇದರಲ್ಲಿ ೯ ಭೂ ಬಂದರುಗಳು ಮತ್ತು ೨ ವಿಮಾನ ನಿಲ್ದಾಣಗಳು ಸೇರಿವೆ.

ಭೋಪಾಲ್ ಮತ್ತು ತಿರುಪತಿ ವಿಮಾನ ನಿಲ್ದಾಣಗಳು, ಅಟ್ಟಾರಿ ಮತ್ತು ಅಗರ್ತಲಾ ಭೂ ಬಂದರುಗಳು ಇದರಲ್ಲಿವೆ. ಈ ಸೇರ್ಪಡೆಯಿಂದ ಇ-ವೀಸಾದ ಉಪಯುಕ್ತತೆ ಮತ್ತಷ್ಟು ಹೆಚ್ಚಲಿದೆ ಎಂದು ಗೃಹ ಸಚಿವಾಲಯ ತಿಳಿಸಿದೆ. ಸುಮಾರು  ಶೇಕಡಾ ೯೫ ಇ-ವೀಸಾ ಅರ್ಜಿಗಳನ್ನು ೭೨ ಗಂಟೆಗಳೊಳಗೆ ಪ್ರಕ್ರಿಯೆಗೊಳಿಸಲಾಗುತ್ತಿದೆ. ಇದರೊಂದಿಗೆ ಇ-ವೀಸಾ ಹೊಂದಿರುವ ವಿದೇಶಿಯರ ಪ್ರವೇಶಕ್ಕೆ ಅನುಮತಿಸಲಾದ ಅಂತಾರಾಷ್ಟ್ರೀಯ ಬಂದರುಗಳ ಸಂಖ್ಯೆ ೮೮ಕ್ಕೆ ಏರಿದೆ. ಇದರಲ್ಲಿ ೩೭ ವಿಮಾನ ನಿಲ್ದಾಣಗಳು, ೩೮ ಸಮುದ್ರ ಬಂದರುಗಳು ಮತ್ತು ೧೩ ಭೂ ಬಂದರುಗಳು ಸೇರಿವೆ.

---

ಸಂಖ್ಯಾಶಾಸ್ತ್ರ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯವು ನಿನ್ನೆ ಸಂಶೋಧನಾ ಅಧ್ಯಯನಗಳನ್ನು ಕೈಗೊಳ್ಳಲು ಡೇಟಾ ಎಂಜಿನಿಯರಿಂಗ್, ಅನಾಲಿಟಿಕ್ಸ್ ಅಂಡ್ ಸೈನ್ಸ್ ಫೌಂಡೇಷನ್ ಹಾಗೂ ಕೋಲ್ಕತ್ತಾದ ಭಾರತೀಯ ಸಂಖ್ಯಾಶಾಸ್ತ್ರ ಸಂಸ್ಥೆಯೊಂದಿಗೆ ಎರಡು ತಿಳುವಳಿಕೆ ಒಪ್ಪಂದಗಳಿಗೆ ಸಹಿ ಹಾಕಿದೆ.

ಈ ಸಹಯೋಗದಡಿ ಸಚಿವಾಲಯವು ಹಣಕಾಸು ನೆರವು ಮತ್ತು ಅಗತ್ಯ ದತ್ತಾಂಶವನ್ನು ಒದಗಿಸಲಿದೆ. ಡೇಟಾ ಎಂಜಿನಿಯರಿಂಗ್, ಅನಾಲಿಟಿಕ್ಸ್ ಅಂಡ್ ಸೈನ್ಸ್ ಫೌಂಡೇಷನ್, ಜಿಡಿಪಿಯ ಅಲ್ಪಾವಧಿ ಮುನ್ಸೂಚನೆಗಾಗಿ ಡೆಸ್ಕ್‌ಟಾಪ್ ಆಧಾರಿತ ತಂತ್ರಾಂಶ ಸಾಧನವನ್ನು ಅಭಿವೃದ್ಧಿಪಡಿಸಲಿದೆ.

---

ಕೃಷಿ ಮತ್ತು ಸಂಸ್ಕರಿತ ಆಹಾರ ಉತ್ಪನ್ನಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ-ಎಪಿಇಡಿಎ ನೆರವಿನಿಂದ, ತ್ರಿಪುರಾದ ಡೆರ್ಗಾಂಗ್ ರೈತ ಉತ್ಪಾದಕರ ಸಂಸ್ಥೆ-ಎಫ್‌ಪಿಒಯಿಂದ ಒಂದು ಮೆಟ್ರಿಕ್ ಟನ್ ಜೇನನ್ನು ಮೊದಲ ಬಾರಿಗೆ ದುಬೈಗೆ ರಫ್ತು ಮಾಡಲಾಗಿದೆ.

ಈ ರಫ್ತು ಎಫ್‌ಪಿಒ ಮತ್ತು ಸ್ಥಳೀಯ ಜೇನು ಸಾಕಾಣಿಕೆದಾರರಿಗೆ ಮಹತ್ವದ ಮೈಲಿಗಲ್ಲಾಗಿದ್ದು, ಸಂಘಟಿತ ಮತ್ತು ರಫ್ತು ಆಧಾರಿತ ಉತ್ಪಾದನೆಯ ಮೂಲಕ ಅಂತರರಾಷ್ಟ್ರೀಯ ಮಾರುಕಟ್ಟೆ ಪ್ರವೇಶಿಸಲು ಹೊಸ ಅವಕಾಶ ಕಲ್ಪಿಸಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ತಿಳಿಸಿದೆ.

---

ಖ್ಯಾತ ಸಾಗರ ವಿಜ್ಞಾನಿ ಹಾಗೂ ಹಿರಿಯ ವಿಜ್ಞಾನಿ ಡಾ. ಶ್ರೀನಿವಾಸ ಕುಮಾರ್ ತುಮ್ಮಲ ಅವರು ಭೂ ವಿಜ್ಞಾನ ಸಚಿವಾಲಯದ ಕಾರ್ಯದರ್ಶಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.

ಭಾರತ, ಆಳ ಸಮುದ್ರ ಕಾರ್ಯಾಚರಣೆ ವಿಸ್ತರಿಸುತ್ತಿರುವುದು, ಹವಾಮಾನ ಮಾದರೀಕರಣ ಸಾಮರ್ಥ್ಯವನ್ನು ಹೆಚ್ಚಿಸುತ್ತಿರುವುದು ಹಾಗೂ ಸಾಗರ ಮತ್ತು ಹವಾಮಾನ ಸಂಬಂಧಿತ ವಿಪತ್ತುಗಳಿಗೆ ಮುನ್ನೆಚ್ಚರಿಕಾ ವ್ಯವಸ್ಥೆಗಳನ್ನು ಬಲಪಡಿಸುತ್ತಿರುವ ಸಂದರ್ಭದಲ್ಲಿ ಡಾ. ತುಮ್ಮಲ ಅವರ ನೇಮಕ ಮಹತ್ವ ಪಡೆದಿದೆ. ಇದರೊಂದಿಗೆ ನೀಲಿ ಆರ್ಥಿಕತೆಯ ಉತ್ತೇಜನಕ್ಕೂ ಹೆಚ್ಚಿನ ಒತ್ತು ನೀಡಲಾಗುತ್ತಿದೆ.

ಡಾ. ತುಮ್ಮಲ ಅವರು ದೂರ ಸಂವೇದಿ ತಂತ್ರಜ್ಞಾನ, ಉಪಗ್ರಹ ಆಧಾರಿತ ಸಾಗರ ವಿಜ್ಞಾನ, ಕರಾವಳಿ ವಿಪತ್ತು ತಗ್ಗಿಸುವಿಕೆ ಮತ್ತು ವಿಪತ್ತು ನಿರ್ವಹಣೆ ಕ್ಷೇತ್ರಗಳಲ್ಲಿ ಮೂರು ದಶಕಗಳಿಗೂ ಹೆಚ್ಚು ಅನುಭವ ಹೊಂದಿದ್ದಾರೆ.

ಸಾಗರ ವಿಜ್ಞಾನ, ಧ್ರುವ ಪ್ರದೇಶಗಳ ಸಂಶೋಧನೆ, ಹವಾಮಾನ ಸಂಬಂಧಿತ ವಿಪತ್ತುಗಳ ತಡೆಗಟ್ಟುವಿಕೆ ಹಾಗೂ ಸಮುದ್ರ ಸಂಪನ್ಮೂಲಗಳ ಸುಸ್ಥಿರ ಬಳಕೆಯಲ್ಲಿ ಭಾರತದ ವೈಜ್ಞಾನಿಕ ಸಾಮರ್ಥ್ಯವನ್ನು ವಿಸ್ತರಿಸುವ ಪ್ರಮುಖ ಹಂತದಲ್ಲಿ ಅವರು ಅಧಿಕಾರ ವಹಿಸಿಕೊಂಡಿದ್ದಾರೆ.

---

ನೈಜೀರಿಯಾದ ಲಾಗೋಸ್‌ನಲ್ಲಿ ನಡೆಯುತ್ತಿರುವ ೨೩ ವರ್ಷದೊಳಗಿನವರ ಕಾಮನ್‌ವೆಲ್ತ್ ಫೆನ್ಸಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾರತ, ಮೊದಲ ದಿನವೇ ೧೭ ಪದಕಗಳನ್ನು ಗೆದ್ದು ಉತ್ತಮ ಆರಂಭ ಮಾಡಿದೆ.

ಇದರಲ್ಲಿ ೪ ಚಿನ್ನ, ೪ ಬೆಳ್ಳಿ ಮತ್ತು ೯ ಕಂಚಿನ ಪದಕಗಳಿವೆ. ಸೇಬರ್, ಫಾಯಿಲ್ ಮತ್ತು ಎಪಿ ವಿಭಾಗಗಳ ೬ ವೈಯಕ್ತಿಕ ಸ್ಪರ್ಧೆಗಳಲ್ಲೂ ಭಾರತೀಯ ಆಟಗಾರರು ಪದಕ ಗೆದ್ದಿದ್ದಾರೆ. ಪುರುಷರ ಸೇಬರ್‌ನಲ್ಲಿ ನಿಖಿಲ್ ವಾಘ್ ಚಿನ್ನ ಗೆದ್ದರೆ,

ಮಹಿಳೆಯರ ಫಾಯಿಲ್‌ನಲ್ಲಿ ಜಾಯ್ಸ್ ಆಶಿತಾ ಹಾಗೂ ಎಪಿಯಲ್ಲಿ ಪ್ರಾಚಿ ಲೋಹನ್ ಚಿನ್ನದ ಪದಕ ಪಡೆದಿದ್ದಾರೆ. ಮಹಿಳೆಯರ ಸೇಬರ್‌ನಲ್ಲಿ ಜೆಫರ್ಲಿನ್ ಚಿನ್ನ ಗೆದ್ದಿದ್ದಾರೆ. ಉಳಿದ ಸ್ಪರ್ಧೆಗಳಲ್ಲೂ ಭಾರತ ಉತ್ತಮ ಪ್ರದರ್ಶನ ಮುಂದುವರಿಸುವ ನಿರೀಕ್ಷೆಯಿದೆ.

__________ ಮುಕ್ತಾಯ __________